***ಓ.ಎಸ್.ನಂ.208-2016***
***ಪಿ.ಡಬ್ಲ್ಯೂ-1.***

***<u>ದಿಃ 04-09-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>***

***<u>ಮುಖ್ಯವಿಚಾರಣೆ ಃ ವಾದಿ ಪರ ವಕೀಲರಿಂದ.</u>***

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

*2.* ನಾನು ಈಗಾಗಲೇ ನ್ಯಾಯಾಲಯಕ್ಕೆ ನಮ್ಮ ಕುಟುಂಬದ ವಂಶವೃಕ್ಷ ಹಾಜರುಪಡಿಸಿದ್ದು ಅದನ್ನು ನಿ.ಪಿ-*1* ಎಂದು, ನನ್ನ ತಂದೆಯ ಮರಣ ಧೃಢೀಕರಣ ಪತ್ರ ಹಾಜರುಪಡಿಸಿದ್ದು ನಿ.ಪಿ-*2* ಎಂದು, ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ *4* ಪಹಣಿಗಳನ್ನು ಹಾಜರುಪಡಿಸಿದ್ದು ನಿ.ಪಿ-*3* ರಿಂದ *6* ರ ವರೆಗೆ ಗುರುತಿಸಲಾಯಿತು. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಆಸ್ತಿ ತೆರಿಗೆ ಭೇಡಿಕೆಯ ಧೃಡೀಕೃತ ಪ್ರತಿ ಹಾಜರುಪಡಿಸಿದ್ದು ನಿ.ಪಿ-*7* ಎಂದು, ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮತ್ತೊಂದು ಪಹಣಿ ಹಾಜರುಪಡಿಸಿದ್ದು ಅದನ್ನು ನಿ.ಪಿ-*8* ಎಂದು, ದಿಃ*07-08-2010* ರ ನೊಂದಣಿ ವಿಭಾಗ ಪತ್ರ ಹಾಜರುಪಡಿಸಿದ್ದು ನಿ.ಪಿ-*9* ಎಂದು ಗುರುತಿಸಲಾಯಿತು.

<u>ಪಾಟೀಸವಾಲಿಗಾಗಿ ಮುಂದೂಡಲಾಯಿತು.</u>

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**